

# ಫುಟ್ಬಾಲ್ ಮೈದಾನ ಅಲ್ಲ; ಪಿಜ್ಜಾ!

ಇದು ಫುಟ್ಬಾಲ್ ಮೈದಾನ ಅಲ್ಲ. ಅಷ್ಟೇ ದೊಡ್ಡ ಗಾತ್ರದ ತಿನ್ನುವ ಪಿಜ್ಜಾ ಎಂದರೆ ಅಚ್ಚರಿಯಾಗುವುದಲ್ಲವೆ? ಇದರ ಸುತ್ತಳತೆ 13 ಸಾವಿರ ಚದರಡಿಗಳಷ್ಟಿದೆ. ಇದು ಆಕ್ರಮಿಸಿದ ನೆಲ ಮೂರನೆಯ ಒಂದು ಎಕರೆಯಷ್ಟು! 25. 6 ಟನ್ ಭಾರವಿರುವ ಅದರ ಗರ್ಭದಲ್ಲಿ 9. 9 ಟನ್ ಹಿಟ್ಟು ಇದೆ. ಹಾಗೆಯೇ ಅದನ್ನು ಹದಗೊಳಿಸಲು ಬಳಸಿದ ನೀರು 2480 ಗ್ಯಾಲನ್.

ಇಲ್ಲಿಗೇ ಮುಗಿಯಲಿಲ್ಲ. ಈ ಪಿಜ್ಜಾ ದ ತಯಾರಿಕೆಗೆ 5 ಟನ್ ಟೊಮ್ಯಾಟೊ ಸಾಸ್, 4. 4 ಟನ್ ಬೆಣ್ಣೆ, 275 ಪೌಂಡ್ ಫಾರಮ್ ಬೆಣ್ಣೆ, 1488 ಪೌಂಡ್ ಮಾರ್ಗರೀನ್, 220 ಪೌಂಡ್ ಲೆಟಿಸ್, 551 ಪೌಂಡ್ ಕಲ್ಲುಪ್ಪು, 55 ಪೌಂಡ್ ವಿನೆಗರ್, 298 ಗ್ಯಾಲನ್ ಯೀಸ್ಟ್, 420 ಪೌಂಡ್ ಸಸ್ಯಜನ್ಯ ತೈಲ, 50 ಪೌಂಡ್ ಬಾಲ್ಸಮಿಕ್ ಬಳಕೆಯಾಗಿದೆ. 48 ತಾಸುಗಳ ನಿರಂತರ ತಯಾರಿಕೆಯ ಪರಿಕ್ರಮದಲ್ಲಿ ಹಂತಹಂತವಾಗಿ 5234 ಮಂದಿಯ ಶ್ರಮದ ವಿನಿಯೋಗವಾಗಿದೆ. 300 ರಿಂದ 500 ಸೆಲ್ಷಿಯಸ್ ತಾಪಮಾನದಲ್ಲಿ ಅದು ಬೆಂದಿದೆ. ಇಟಲಿಯ ಅಲ್ರಿಚ್ ಲಾಡುರ್ನರ್ ಮತ್ತು ಡಾ. ಸ್ಕಾಟ್ ಇದರ ತಯಾರಕರು. ತಯಾರಿಸಿದ ಉದ್ದೇಶ ಗಿನ್ನೆಸ್ ದಾಖಲೆ ಸೇರುವುದು, ಇಪ್ಪತ್ತೆರಡು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾ ಸ್ಥಾಪಿಸಿದ್ದ ವಿಶ್ವ ದಾಖಲೆಯನ್ನು ಮುರಿಯುವುದು. ಈ ಉದ್ದೇಶ ಸಫಲವಾಗಿದೆ.

■ ಪರಾಶಾ



